ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**31.12.2024** **19.35 hrs**

<><*<><>*><>

ಮುಖ್ಯಾಂಶಗಳು

೧. ಗಗನಯಾನ ಮಿಷನ್ ಅಡಿಯಲ್ಲಿ ಬಾಹ್ಯಾಕಾಶಕ್ಕೆ ಮಹಿಳಾ ರೋಬೋಟ್ ಕಳುಹಿಸಲು ಭಾರತದ ಸಿದ್ಧತೆ

೨. ಇಂಡೋ-ಪೆಸಿಫಿಕ್ ವಲಯದಲ್ಲಿ ಸ್ಥಿರತೆ, ಸಮೃದ್ಧಿಗಾಗಿ 'ಕ್ವಾಡ್' ಪ್ರೇರಕ ಶಕ್ತಿ- ಸಚಿವ ಡಾ.ಎಸ್.ಜೈಶಂಕರ್

೩. ಜಗತ್ತಿನಾದ್ಯಂತ ನೂತನ ಸಂವತ್ಸರ ೨೦೨೫ ರ ಸ್ವಾಗತಕ್ಕೆ ಅದ್ದೂರಿ ಸಿದ್ಧತೆ

೪. ಸಂತೋಷ್ ಟ್ರೋಫಿ ಫುಟ್‌ಬಾಲ್ ಪಂದ್ಯಾವಳಿ; ಫೈನಲ್‌ನಲ್ಲಿಂದು ಕೇರಳ-ಪಶ್ಚಿಮ ಬಂಗಾಳ ಹಣಾಹಣಿ

<><*<><>*><>

೨೦೨೪ನೇ ವರ್ಷ ಭಾರತ ಬಾಹ್ಯಾಕಾಶ ವಲಯದಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದಿದೆ ಎಂದು ಕೇಂದ್ರ ಪರಮಾಣು ಇಂಧನ ಮತ್ತು ಬಾಹ್ಯಾಕಾಶ, ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. ವರ್ಷಾರಂಭದ ಮೊದಲ ದಿನವೇ ಎಕ್ಸ್‌ಪಿಒ ಸ್ಯಾಟ್, ಆದ್ಯತ್ಯ ಎಲ್-೧ ಮಿಷನನ್ನು ಭೂಕಕ್ಷೆಗೆ ಯಶಸ್ವಿಯಾಗಿ ಸೇರಿಸಲಾಗಿತ್ತು. ಅಲ್ಲದೆ, ಆಗಸ್ಟ್ ತಿಂಗಳಲ್ಲಿ ಚೊಚ್ಚಲ ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ದೇಶ ಆಚರಿಸಿತ್ತು. ಇದಲ್ಲದೆ, ನಿನ್ನೆಯಷ್ಟೆ ಇಸ್ರೋ, ಸ್ಪ್ಯಾಡೆಕ್ಸ್ ಮಿಷನನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ ಎಂದು ಸಚಿವರು ವಿವರಿಸಿದ್ದಾರೆ. ದೆಹಲಿಯಲ್ಲಿಂದು ಮಧ್ಯಾಹ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಗನಯಾನ ಸಂಬಂಧ ಈಗಾಗಲೇ ಹಲವು ಪೂರ್ವಭಾವಿ ಪ್ರಯೋಗಗಳು ನಡೆದಿವೆ. ಈ ಪ್ರಯತ್ನಗಳು ಸರಿಯಾದ ಮಾರ್ಗದಲ್ಲಿದ್ದು, ಮುಂದಿನ ವರ್ಷದಲ್ಲಿ ಮಹಿಳಾ ರೋಬೋಟ್ ಅನ್ನು ಕಳುಹಿಸುವ ಸಂಬಂಧ ವಸ್ತ್ರ ವಿನ್ಯಾಸದ ಪೂರ್ವ ತಯಾರಿ ನಡೆದಿದೆ ಎಂದು ಹೇಳಿದರು. ಡಾಕಿಂಗ್ ತಂತ್ರಜ್ಞಾನ ಸಂಬಂಧ ಸ್ಪಾಡೆಕ್ಸ್ ಮಿಷನ್ ಉಡಾವಣೆ ಮೂಲಕ ಭಾರತ, ಇದೇ ಮೊದಲ ಬಾರಿಗೆ ಪ್ರಯೋಗ ನಡೆಸಿದೆ ಎಂದು ಸಚಿವ ಡಾ.ಜಿತೇಂದ್ರ ಸಿಂಗ್ ತಿಳಿಸಿದರು.

ಧ್ವನಿ: ಜಿತೇಂದ್ರ ಸಿಂಗ್, ೩೦ ಸೆಕೆಂಡ್

ಗಗನಯಾನದ ಮುಂದಿನ ಭಾಗಗಳಲ್ಲಿ ಹಾಗೂ ಭಾರತದ ಸ್ಪೇಸ್ ಸ್ಟೇಷನ್ ಪ್ರೋಗ್ರಾಮ್‌ನಲ್ಲಿ ಸ್ಪೇಸ್ ಡಾಕಿಂಗ್ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗುವುದು ಎಂದು ಹೇಳಿರುವ ಸಚಿವರು, ಇದು ಸಂಪೂರ್ಣವಾಗಿ ದೇಶೀಯ ತಂತ್ರಜ್ಞಾನವಾಗಿರಲಿದೆ. ಇದನ್ನು

ಭಾರತೀಯ ಡಾಕಿಂಗ್ ತಂತ್ರಜ್ಞಾನವೆಂದು ಕರೆಯುವುದು ಸೂಕ್ತ ಎಂದು ತಿಳಿಸಿದ್ದಾರೆ. ಈ ಪ್ರಯತ್ನಗಳು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ ಆತ್ಮ ನಿರ್ಭರ ಭಾರತ ನಿರ್ಮಾಣದ ದಾರಿಯಲ್ಲಿ ಸಾಗುತ್ತಿವೆ. ಮತ್ತೊಮ್ಮೆ ಇಸ್ರೋ ತಂಡವನ್ನು ಅಭಿನಂದಿಸುವುದಾಗಿ ಸಚಿವರು ಹೇಳಿದ್ದಾರೆ.

**<><*<><>*><>**

ಇಂಡೋ-ಪೆಸಿಫಿಕ್ ವಲಯದಲ್ಲಿ ಸ್ಥಿರತೆ, ಪ್ರಗತಿ ಮತ್ತು ಸಮೃದ್ಧಿ ಸಾಧಿಸಲು ಪ್ರೇರಕ ಶಕ್ತಿಯಾಗಿ ಕ್ವಾಡ್ ಮುಂದುವರಿದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಸಚಿವರು, ಆಸ್ಟ್ರೇಲಿಯಾದ ವಿದೇಶಾಂಗ ವ್ಯವಹಾರಗಳ ಸಚಿವ ಪೆನ್ನಿ ವಾಂಗ್, ಜಪಾನ್ ವಿದೇಶಾಂಗ ಸಚಿವ ಟಕೇಶಿ ಇವಾಯ, ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಆಂಟೊನಿ ಬ್ಲಿಂಕನ್ ಅವರೊಂದಿಗೆ ಈ ವಲಯದ ಅಗತ್ಯಗಳನ್ನು ಪೂರೈಸಲು ಭಾರತ ಬದ್ಧವಾಗಿದೆ ಎಂದು ತಿಳಿಸಿದ್ದಾರೆ. ಕ್ವಾಡ್‌ನ ೨೦ನೇ ವಾರ್ಷಿಕೋತ್ಸವದ ಅಂಗವಾಗಿ ಕ್ವಾಡ್‌ನ ವಿದೇಶಾಂಗ ಸಚಿವರು ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಲಾಗಿದೆ. ಕ್ವಾಡ್ ದೇಶಗಳ ಸಕ್ರಿಯ ಪಾಲುದಾರಿಕೆಯೊಂದಿಗೆ ಇಂಡೋ-ಪೆಸಿಫಿಕ್ ವಲಯದ ಅಭಿವೃದ್ಧಿಗೆ ಶ್ರಮಿಸಲಾಗುವುದು. ಹವಾಮಾನ ಬದಲಾವಣೆ, ಕ್ಯಾನ್ಸರ್ ತಡೆಗಟ್ಟುವುದು ಸೇರಿದಂತೆ ಗುಣಮಟ್ಟದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಜಂಟಿ ಪ್ರಯತ್ನ ನಡೆಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

**<><*<><>*><>**

೨೦೨೪ಕ್ಕೆ ವಿದಾಯ ಹೇಳುವ ಜೊತೆಗೆ ನೂತನ ವರ್ಷ ೨೦೨೫ ರ ಸ್ವಾಗತಕ್ಕೆ ಕ್ಷಣಗಣನೆ ಆರಂಭವಾಗಿದೆ. ನೂತನ ವರ್ಷವನ್ನು ಅದ್ದೂರಿಯಾಗಿ ವಿಶ್ವದಾದ್ಯಂತ ಜನರು ಕಾತುರದಿಂದ ಎದುರ ನೋಡುತ್ತಿದ್ದಾರೆ. ರಾಷ್ಟ್ರ ರಾಜಧಾನಿ ದೆಹಲಿ ಸೇರಿದಂತೆ ಜಗತ್ತಿನ ಪ್ರಮುಖ ನಗರಗಳಲ್ಲಿ ಸ್ಥಳೀಯ ಸಂಸ್ಕೃತಿ ಮತ್ತು ಸಂಪ್ರದಾಯದಂತೆ ಹೊಸ ವರ್ಷವನ್ನು ಸ್ವಾಗತಿಸಲು ಜನರು ಸಜ್ಜಾಗಿದ್ದಾರೆ. ಕರ್ನಾಟಕದ ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ ಸೇರಿದಂತೆ ಎಲ್ಲೆಡೆ ನೂತನ ವರ್ಷವನ್ನು ಸ್ವಾಗತಿಸಲು ಜನರು ಪೂರ್ವ ತಯಾರಿ ನಡೆಸಿದ್ದಾರೆ. ವಿಶೇಷವಾಗಿ ಬೆಂಗಳೂರಿನ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ ಸೇರಿದಂತೆ ನಗರದಲ್ಲಿ ಪ್ರಮುಖ ಬಡಾವಣೆಗಳು ವಿದ್ಯುತ್ ದೀಪಾಲಂಕಾರದಿಂದ ಝಗಮಗಿಸುತ್ತಿವೆ. ಭೋಜನ ಪ್ರಿಯರಿಗಾಗಿ ನಾಲಗೆಯ ಮೇಲೆ ನೀರೂರಿಸುವ ಭಕ್ಷ್ಯ ಭೋಜನಗಳು ಮಾರಾಟಕ್ಕೆ ಸಿದ್ಧವಾಗಿವೆ. ಹೊಸ ವರ್ಷಾಚರಣೆ ಹಿನ್ನಲೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ಬಿಗಿಬಂದೋಬಸ್ತ್ ಏರ್ಪಡಿಸಲಾಗಿದೆ. ನಂದಿ ಬೆಟ್ಟ, ಚಾಮುಂಡಿ ಬೆಟ್ಟ ಸೇರಿದಂತೆ ಎಲ್ಲ ಪ್ರವಾಸಿ ತಾಣಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ. ನೂತನ ಹೊಸ ವರ್ಷಾರಂಭದ ಮೊದಲ ದಿನವಾದ ನಾಳೆ ಬಹುತೇಕ ದೇವಾಲಯಗಳಲ್ಲಿ ವಿಶೇಷ ಅಲಂಕಾರ ಮತ್ತು ಪೂಜಾ ವಿಧಿಗಳಿಗೆ ಈಗಿನಿಂದಲೇ ಭರದಿಂದ ಸಾಗಿವೆ.

**<><*<><>*><>**

ಸ್ಥಳೀಯ ನಿವಾಸಿಗಳು ೨೦೨೪-೨೫ನೇ ಸಾಲಿನ ಮೌಲ್ಯ ಮಾಪನ ವರ್ಷದಲ್ಲಿ ಆದಾಯ ತೆರಿಗೆ ರಿಟನ್ಸ್ ಸಲ್ಲಿಸುವಲ್ಲಿ ವಿಳಂಬವಾಗಿದ್ದಲ್ಲಿ ಅಥವಾ ಪರಿಷ್ಕೃತ ದಾಖಲೆಗಳನ್ನು ಸಲ್ಲಿಸಲು ಬರುವ ಜನವರಿ ೧೫ರವರೆಗೆ ಕಾಲಾವಕಾಶ ವಿಸ್ತರಿಸಲಾಗಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿ- ಸಿಬಿಡಿಟಿ ಹೇಳಿದೆ. ಇದಕ್ಕೂ ಮುನ್ನ, ತೆರಿಗೆದಾರರು ಆದಾಯ ತೆರಿಗೆ ರಿಟನ್ಸ್ ಸಲ್ಲಿಸಲು ವಿಳಂಬ ಮಾಡಿರುವ ಹಾಗೂ ಪರಿಷ್ಕೃತ ದಾಖಲೆ ಸಲ್ಲಿಸಲು ಇಂದು ಕೊನೆಯ ದಿನವಾಗಿತ್ತು.  ಸಿಬಿಡಿಟಿ ಮಂಡಳಿಯ ನಿರ್ಧಾರದಿಂದ ಐಟಿ ರಿಟನ್ಸ್ ಸಲ್ಲಿಸಲು ತೆರಿಗೆದಾರರಿಗೆ ಇನ್ನೂ ಎರಡು ವಾರಗಳ ಹೆಚ್ಚುವರಿ ಅವಕಾಶ ದೊರೆತಂತಾಗಿದೆ.

**<><*<><>*><>**

೨೦೨೪ನೇ ಸಾಲಿನ ವಾರ್ಷಿಕ ವಿದ್ಯಮಾನ ಒಳಗೊಂಡ ವಾರ್ತಾ ಸಂಚಿಕೆ ಕಾಲಚಕ್ರ ಇನ್ನು ಕೆಲವೇ ಕ್ಷಣಗಳಲ್ಲಿ ಪ್ರಸಾರವಾಗಲಿದೆ.  ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ಪ್ರಮುಖ ಘಟನಾವಳಿಗಳ ಸಂಕ್ಷಿಪ್ತ ಅವಲೋಕನವನ್ನು ಇದು ಒಳಗೊಂಡಿದೆ. ಬೆಂಗಳೂರು ಆಕಾಶವಾಣಿ ಸುದ್ದಿವಿಭಾಗ ಈ ಕಾರ್ಯಕ್ರಮವನ್ನು ಸಿದ್ದಪಡಿಸಿದೆ.

**<><*<><>*><>**

ಹೊಸದಾಗಿ ಬಂದಿರುವ ರೋಹಿಂಗ್ಯ ಜನರನ್ನು ನೋಂದಾಯಿಸುವ ಕುರಿತು ಬಾಂಗ್ಲಾದೇಶ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಗೃಹ ವ್ಯವಹಾರಗಳ ಸಲಹೆಗಾರ ನಿವೃತ್ತ ಲೆಫ್ಟಿನಿಂಟ್ ಜನರಲ್ ಎಮ್.ಡಿ.ಜಹಂಗೀರ್ ಆಲಂ ಚೌಧರಿ ಹೇಳಿದ್ದಾರೆ. ಅವರಿಗೆ ಬಾಂಗ್ಲಾದೇಶದಲ್ಲಿ ಆಶ್ರಯ ನೀಡುವ ಕುರಿತಂತೆಯೂ ಯಾವುದೇ ನೀತಿ ನಿರ್ಧಾರ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಕಳೆದ ಸಂಜೆ, ಮ್ಯಾನ್ಮಾರ್‌ಗೆ ಹೊಂದಿಕೊಂಡಿರುವ ತೇಕ್ನಾಫ್ ಗಡಿಯ ಪ್ರದೇಶಕ್ಕೆ ಭೇಟಿ ನೀಡಿ, ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮ್ಯಾನ್ಮಾರ್ ಸರ್ಕಾರ ಮತ್ತು ಗಡಿ ಪ್ರದೇಶವನ್ನು ನಿಯಂತ್ರಿಸುತ್ತಿರುವ ಬಂಡಾಯ ಗುಂಪಾದ ಆರ್ಕಾನ್ ಆರ್ಮಿ ಜೊತೆ ಸರ್ಕಾರ ಸಂಪರ್ಕದಲ್ಲಿದೆ ಎಂದು ಅವರು ತಿಳಿಸಿದ್ದಾರೆ.

**<><*<><>*><>**

ಇರಾನ್‌ನಿಂದ ಹೊರಹಾಕಲಾಗಿರುವ ೧೦ ಸಾವಿರಕ್ಕೂ ಹೆಚ್ಚು ತನ್ನ ಪ್ರಜೆಗಳ ಪಾಸ್‌ಪೋರ್ಟ್‌ಗಳನ್ನು ಪಾಕಿಸ್ತಾನ ಬ್ಲಾಕ್ ಮಾಡಿದೆ. ಈ ಜನ ಅಕ್ರಮವಾಗಿ ಯೂರೋಪ್‌ಗೆ ಪ್ರವೇಶ ಮಾಡಲು ಯತ್ನಿಸುತ್ತಿದ್ದ ಸಂದರ್ಭದಲ್ಲಿ ಇರಾನ್ ಬಂಧಿಸಿತ್ತು. ಗ್ರೀಕ್‌ನ ಭೌಗೋಳಿಕ ವ್ಯಾಪ್ತಿಗೆ ಬರುವ ಸಮುದ್ರದಲ್ಲಿ ಅಕ್ರಮ ವಲಸೆಗಾರರನ್ನು ಸಾಗಿಸುತ್ತಿದ್ದ ಹಡಗು ಮುಳುಗಿದ ಪರಿಣಾಮ ಅದರಲ್ಲಿದ್ದ ೪೦ ಪಾಕಿಸ್ತಾನಿಯರು ಇತ್ತೀಚಿಗೆ ಸಾವನ್ನಪ್ಪಿದ್ದರು. ಅದಾದ ನಂತರ ದೇಶದೊಳಕ್ಕೆ ಅಕ್ರಮವಾಗಿ ನುಸುಳುವವರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಿದೆ. ಪಾಕಿಸ್ತಾನದ ಒಳಾಡಳಿತ ಸಚಿವಾಲಯದ ಮೂಲಗಳ ಪ್ರಕಾರ ಇರಾನ್ ದೇಶಕ್ಕೆ ಅಕ್ರಮವಾಗಿ ನುಸುಳಲು ಯತ್ನಿಸಿದ ೧೦ ಸಾವಿರದ ೪೫೪ ಪಾಕಿಸ್ತಾನಿಯರನ್ನು, ಅಲ್ಲಿನ ಸರ್ಕಾರ ಬಂಧಿಸಿದ ನಂತರ ಅವರ ಪಾಸ್‌ಪೋರ್ಟ್‌ಗಳನ್ನು ಬ್ಲಾಕ್ ಮಾಡಲು ನಿರ್ಧರಿಸಿದೆ.

<><*<><>*><>

ಕೇರಳದ ವಯನಾಡ್‌ನಲ್ಲಿ ಕಳೆದ ಜುಲೈ ೩೦ ರಂದು ಸಂಭವಿಸಿದ್ದ ವಿನಾಶಕಾರಿ ಭೂಕುಸಿತವನ್ನು ತೀವ್ರ ಸ್ವರೂಪದ ವಿಪತ್ತು ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಭೂಕುಸಿತದಿಂದ ಉಂಟಾಗಿರುವ ಗಮನಾರ್ಹ ಪರಿಣಾಮಗಳನ್ನು ಒಪ್ಪಿಕೊಂಡಿದೆ ಎಂದು ತಿಳಿಸಿದೆ. ಕೇಂದ್ರ ಗೃಹ ಸಚಿವಾಲಯ ಈ ಸಂಬಂಧ ಕೇರಳ ಸರ್ಕಾರಕ್ಕೆ ಮಾಹಿತಿ ನೀಡಿದ್ದು, ಆರಂಭಿಕ ಹಣಕಾಸಿನ ನೆರವು ರಾಜ್ಯ ವಿಪತ್ತು ಪ್ರತಿಕ್ರಿಯಾ ನಿಧಿಯಿಂದ ಬರಲಿದ್ದು, ಅಂತರ ಸಚಿವಾಲಯದ ಕೇಂದ್ರೀಯ ತಂಡದ ಮೌಲ್ಯ ಮಾಪನಗಳ ಅನುಸರಿಸಿ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ನಿಧಿಯ ಮೂಲಕ ಹೆಚ್ಚುವರಿ ನೆರವು ಬಿಡುಗಡೆಯಾಗಲಿದೆ ಎಂದು ತಿಳಿಸಿದೆ. ವಯನಾಡು ಜಿಲ್ಲೆಯ ಮೆಪ್ಪಾಣಿ ಭೂಕುಸಿತ ದುರಂತದ ತೀವ್ರತೆ ಹಾಗೂ ಪ್ರಮಾಣವನ್ನು ಗಮನದಲ್ಲಿಟ್ಟಿಕೊಂಡು ಎಲ್ಲ ಪ್ರಾಯೋಗಿಕ ಉದ್ದೇಶಗಳಿಗಾಗಿ ಅಂತರ ಸಚಿವಾಲಯದ ಕೇಂದ್ರ ತಂಡ ತೀವ್ರ ಸ್ವರೂಪದ ವಿಪತ್ತು ಎಂದು ಪರಿಗಣಿಸಿದೆ ಎಂದು ವಿವರಿಸಿದೆ.

<><*<><>*><>

ಮುಂಬರುವ ದೆಹಲಿ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ನಡುವೆ ಆರೋಪ-ಪ್ರತ್ಯಾರೋಪಗಳು ಧಾರಾಳವಾಗಿ ನಡೆಯುತ್ತಿವೆ. ದೆಹಲಿಯ ಆಡಳಿತರೂಢ ಪಕ್ಷ, ವಾಯು ಮಾಲಿನ್ಯ ನಿಯಂತ್ರಿಸುವಲ್ಲಿ ವಿಫಲವಾಗಿದೆ. ಜನರಿಗೆ ಉತ್ತಮ ಆರೋಗ್ಯ ಸೌಲಭ್ಯ ಕಲ್ಪಿಸಿಲ್ಲ ಹಾಗೂ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಲ್ಲಿಯೂ ವಿಫಲವಾಗಿದೆ ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಆರೋಪಿಸಿದ್ದಾರೆ. ಈ ನಡುವೆ ಆಮ್ ಆದ್ಮಿ ಪಕ್ಷದ ಸರ್ಕಾರ, ಚುನಾವಣೆ ಹಿನ್ನೆಲೆಯಲ್ಲಿ ಹಲವು ಘೋಷಣೆಗಳನ್ನು ಮಾಡಿದೆ. ಅಲ್ಲದೆ, ಸರ್ಕಾರ ಜಾರಿಗೊಳಿಸುರುವ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಬಿಜೆಪಿ ವಿರೋಧಿಸುತ್ತಿದೆ ಎಂದು ಆಪ್ ನಾಯಕ ಸಂಜಯ್ ಸಿಂಗ್ ಟೀಕಿಸಿದ್ದಾರೆ. ದೆಹಲಿ ಸರ್ಕಾರ ದುರಾಡಳಿತದ ವಿರುದ್ಧ ಕಾಂಗ್ರೆಸ್, ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಕಾಂಗ್ರೆಸ್‌ನ ಹಿರಿಯ ನಾಯಕ ಸಂದೀಪ್ ಧೀಕ್ಷಿತ್ ದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿ, ದೆಹಲಿ ಜನರ ಅನುಕೂಲಕ್ಕಾಗಿ ಆಪ್ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಟುವಾಗಿ ದೂರಿದ್ದಾರೆ.

<><*<><>*><>

ನವೆಂಬರ್ ೧೫ ರಿಂದ ನಡೆಯುತ್ತಿರುವ ಸಂತೋಷ್ ಟ್ರೋಫಿ - ರಾಷ್ಟ್ರೀಯ ಫುಟ್ ಬಾಲ್ ಚಾಂಪಿಯನ್ ಶಿಪ್ ಪಂದ್ಯಾವಳಿ, ಅಂತಿಮ ಹಂತ ತಲುಪಿದ್ದು, ಹೈದರಾಬಾದ್ ನಲ್ಲಿಂದು ಆರಂಭವಾಗಿರುವ ಫೈನಲ್ ಪಂದ್ಯದಲ್ಲಿ ಕೇರಳ ಹಾಗೂ ಪಶ್ಚಿಮ ಬಂಗಾಳ ತಂಡಗಳು ಟ್ರೋಫಿಗಾಗಿ ಸೆಣಸಾಟ ನಡೆಸುತ್ತಿವೆ. ಸೆಮಿಫೈನಲ್ ಗಳಲ್ಲಿ ಕೇರಳ ತಂಡ ಮಣಿಪುರ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿದ್ದರೆ, ಪಶ್ಚಿಮ ಬಂಗಾಳ ತಂಡ ಸರ್ವಿಸಸ್ ತಂಡವನ್ನು ಸೋಲಿಸಿ, ಅಂತಿಮ ಪಂದ್ಯಕ್ಕೆ ತಲುಪಿದೆ.

**<><*<><>*><>**

ಛತ್ತೀಸ್‌ಗಢದ ರಾಯ್‌ಪುರದಲ್ಲಿ ನಡೆದ ೨೪ನೇ ರಾಷ್ಟ್ರೀಯ ವನವಾಸಿ ಕ್ರೀಡಾಕೂಟ ಇಂದು ಮುಕ್ತಾಯಗೊಂಡಿದೆ. ಫುಟ್‌ಬಾಲ್‌ನ ಅಂತಿಮ ಪಂದ್ಯದಲ್ಲಿ ಸಂತಾಲ್ ಪರಗಣ ತಂಡವು ಟೈ ಬ್ರೇಕರ್‌ನಲ್ಲಿ ಕೇರಳವನ್ನು ೪-೧ ಗೋಲುಗಳಿಂದ ಸೋಲಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

**<><*<><>*><>**

ರೂರ್‌ಕೆಲಾದಲ್ಲಿಂದು ನಡೆಯಲಿರುವ ಹಾಕಿ ಇಂಡಿಯಾ ಲೀಗ್‌ನ ಪಂದ್ಯದಲ್ಲಿ ದೆಹಲಿಯ ಎಸ್.ಜಿ.ಪೈಪರ್ಸ್ ಹಾಗೂ ಹೈದರಾಬಾದ್ ತೂಫಾನ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೮.೧೫ ಕ್ಕೆ ಆರಂಭವಾಗಲಿದೆ. ಕಳೆದ ರಾತ್ರಿ ನಡೆದ ಪಂದ್ಯದಲ್ಲಿ ಯುಪಿ ರುದ್ರಾಸ್ ತಂಡ, ಚಾಂಪಿಯನ್ ಕಳಿಂಗ ಲಾನ್ಸರ್ಸ್ ವಿರುದ್ಧ ೩-೧ ಗೋಲುಗಳಿಂದ ಗೆಲುವು ಸಾಧಿಸಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**